ಹಿಂದೆ ಬಲು ದೂರದಲ್ಲಿ, ಕೆನ್ನೀಲಿ ಬಣ್ಣ ಮೇಲೇಳುತ್ತಿತ್ತು. ದೂರದ ಅಸ್ಪಷ್ಟ ಕಾಡಿನಲ್ಲಿ, ಕೊರೆವ ಚಳಿಯಲ್ಲಿ, ಕಾಡು ಗುಡಿಸಲೊಂದರಲ್ಲಿ ಕೋಳಿಯೊಂದು ಕೂಗುತ್ತಿತ್ತು.

ಸ್ಟ್ರೆಶ್ನೆಫ್ ಅಂಗಳದ ಮೆಟ್ಟಿಲುಗಳ ಮೇಲೆ ಕುಳಿತ. ಅವನ ಕಾಲಿಗೆ ಕಾಲುಚೀಲಗಳಿದ್ದವು. ಥಂಡಿ ಗಾಳಿಯು ಅವನ ತೆಳ್ಳನೆಯ ಶರ್ಟಿನೊಳಗಿಂದ ಹಾಯುತ್ತಾ, ಮೂಳೆಗಳಲ್ಲಿ ನಡುಕ ಹುಟ್ಟಿಸುತ್ತಿತ್ತು.

'ಆಮೇಲೆ, ಬಹುಶಃ ಪಾತ್ರಗಳು ಬದಲಾದವು' ಮೆಲು ದನಿಯಲ್ಲಿ ಜಿಗುಪ್ಸೆಯಿಂದ ಅಂದುಕೊಂಡ. 'ಓಹ್, ಈಗದು ಏನು, ಏನೇನೂ ಅಲ್ಲ, ಎಲ್ಲಾ ಮುಗಿದು ಹೋಗಿದೆ...'

## 4

ಥಂಡಿಯಿಂದ ಕೊರೆಯುತ್ತಿದ್ದ ನಡುಮನೆಯಲ್ಲಿದ್ದ ದೊಡ್ಡ ಪೆಠಾರಿಯ ಮೇಲೆ ಅವರಿಗೆ ಟೀ ತಂದು ಇಡಲಾಯ್ತು. ಟೀ ಇದ್ದ ಸಾಮವಾ ಮಾಸಿಹೋಗಿದ್ದಲ್ಲದೆ, ಬೂಸು ಹಿಡಿದಿದ್ದ ಅದು ಹಸಿರು ಬಣ್ಣಕ್ಕೆ ತಿರುಗಿತ್ತು. ಅದರ ಬಿಸಿ ಹೋಗಿ ಆಗಲೇ ತುಂಬಾ ಹೊತ್ತಾಗಿತ್ತು. ಥಂಡಿಯಿಂದ ತೊಯ್ದು ಹೋಗಿದ್ದ ಕಿಟಕಿ, ಅದರ ಮೇಲ್ಪಟ್ಟಿಗಳಿಂದ ಕುಗ್ಗಿ ಕೆಳ ಜರುಗಿ ಕಂಡಿ ಬಿದ್ದು, ಅಲ್ಲಿಂದ ಹಿಮಗವಿದ ಬೆಳಗಿನಲ್ಲಿ ಆಡುತ್ತಿದ್ದ ಸೂರ್ಯ ಪ್ರಭೆಯನ್ನೂ, ಹಸಿರಿಲ್ಲದ ಮರಗಳ ನಡುವೆ ಅಲ್ಲೊಂದು ಇಲ್ಲೊಂದು ಕಾಣುತ್ತಿದ್ದ ಬಾಗಿದ ಮರಗಳನ್ನೂ ಕಾಣಬಹುದಿತ್ತು. ಬರಿಗಾಲಿನ, ಕೆಂಪು ಕೂದಲಿನ ಮತ್ತು ನಿದ್ದೆಯಿಂದ ದದ್ದುಗಟ್ಟಿದ್ದ ಕೆಲಸದ ಹುಡುಗಿ ಒಳ ಬಂದು ಅಂದಳು:

'ಮಿಟ್ರಿ ಬಂದಿದ್ದಾನೆ.'

'ಸ್ವಲ್ಪ ಹೊತ್ತು ಕಾಯಬಲ್ಲ ಅವನು' ಕತ್ತನ್ನು ಎತ್ತದೆ ಅಂದ ಸ್ಟ್ರೆಶ್ನೆಫ್.

ವಿಯರ ಕೂಡಾ ಕತ್ತೆತ್ತಿ ನೋಡಲಿಲ್ಲ. ಒಂದು ರಾತ್ರಿಗೇ ಅವಳ ಮುಖ ಮುದುಡಿತ್ತು. ಕಣ್ಣ ರೆಪ್ಪೆಗಳ ಕೆಳಗೆ ಕಂದು ಕಲೆಗಳಾಗಿದ್ದವು. ಅವಳು ಧರಿಸಿದ್ದ ಕಪ್ಪು ದಿರಿಸು ಅವಳು ತುಂಬಾ ಚಿಕ್ಕವಳಂತೆಯೂ, ಚಂದವಾಗಿಯೂ ಕಾಣುವಂತೆ ಮಾಡಿತ್ತು. ಅವಳ ಕಪ್ಪು ಕೂದಲು ಅವಳಿಗೆ ಗುಲಾಬಿ ನುಣುಪಿನ ಮೆರಗು ತಂದಿತ್ತು. ಸ್ಟ್ರೆಶ್ನೆಫ್‌ನ ನೀಳ, ಒರಟು ಮುಖದಲ್ಲಿ ನಿಸ್ತೇಜ ಕಳೆ ಸುರಿಯುತ್ತಿತ್ತು.

ಇನ್ನೂ ಸ್ವಲ್ಪವೇ ದೂರ ನಡೆದಿದ್ದರೂ ಸೂರ್ಯ ಕಣ್ಣು ಕುಕ್ಕುತ್ತಿದ್ದ. ಮನೆಯ ಮುಂದಿನ ಅಂಗಳ ಪೂರಾ ಬಿಳಿಯ ಹಿಮದ ಹಾಸಿಗೆಯನ್ನು ಹೊದ್ದಿತ್ತು. ಗಡ್ಡೆಯಿಬ್ಬನಿ ಉಪ್ಪಿನ ನೀರಿನಂತೆ ಹುಲ್ಲಿನ ಮೇಲೆಲ್ಲಾ ತುಂತುರು ಹನಿಗಳನ್ನು ಚಿಮುಕಿಸಿತ್ತು. ಕ್ಯಾಬೇಜ್ ಎಲೆಗಳ ಹಸಿರು ತೊಗಟೆಗಳು ಅಂಗಳದಲ್ಲೆಲ್ಲಾ ಚೆಲ್ಲಿದ್ದವು. ಅಂಗಳದವರೆಗೂ ಗಾಡಿಯನ್ನು ಹೊಡೆದುಕೊಂಡು ಬಂದಿದ್ದ ಜಡ ಕಂಗಳ ಮನುಷ್ಯ ಗಾಡಿಯ ತುಂಬಾ ಛಾವಣಿಗೆ ಹೊದಿಸುವ ಹುಲ್ಲನ್ನೂ, ಅದನ್ನು ಕವುಚಿಕೊಂಡಿದ್ದ ಹಿಮವನ್ನೂ ತುಂಬಿಕೊಂಡು, ಅನಂತರ ಅಲ್ಲಲ್ಲಿ ಬಿದ್ದಿದ್ದ ಹುಲ್ಲನ್ನು ತುಳಿದುಕೊಂಡು ನಡೆದಾಡುತ್ತಿದ್ದ. ಅವನ ಹಲ್ಲುಗಳ ನಡುವಿದ್ದ ಚುಟ್ಟದ ಕೊಳವೆಯಿಂದ ಬರುತ್ತಿದ್ದ ಹೊಗೆ ಸುರುಳಿ ಸುರುಳಿಯಾಗಿ ಅವನ ಭುಜಗಳ ಮೇಲಿಂದ ಹಿಂದಕ್ಕೆ ಹೋಗುತ್ತಿತ್ತು. ವಿಯರ ತುಪ್ಪಳದ ಕೋಟನ್ನು ತೊಟ್ಟು ಮನೆಯಿಂದ ಆಚೆ ಬಂದಳು. ಒಂದು ಕಾಲದಲ್ಲಿ ತುಂಬಾ ದುಬಾರಿಯೂ, ಆಧುನಿಕವೂ ಆಗಿದ್ದ ಅದು ಈಗ, ಹಳತಾಗಿ ಹೋಗಿದ್ದಲ್ಲದೆ, ಹಳೆಯ ಫ್ಯಾಶನ್ ಕೂಡಾ ಆಗಿ ಹೋಗಿತ್ತು. ಅವಳ ತಲೆಯ ಮೇಲೆ ಬೂಸ್ಟು ಹಿಡಿದ, ಸ್ಯಾಟಿನ್ ಹೂಗಳಿಂದ ಮಾಡಿದ ಹ್ಯಾಟೊಂದು ಇತ್ತು. ಸ್ಟ್ರೆಶ್ನೆಫ್ ಅವಳನ್ನು ಕುದುರೆಯ ಮೇಲೆ ಕೂರಿಸಿಕೊಂಡು ಮುಖ್ಯ ರಸ್ತೆಯವರೆಗೂ ಹಿಮಗಟ್ಟಿದ ಕಾಡು ಜಾಡುಗಳಲ್ಲಿ ಗಾಡಿಯನ್ನು ಹಿಂಬಾಲಿಸಿದ. ಅವನ ಕುದುರೆ ಹಸಿರು ಹುಲ್ಲಿಗೆ ಬಾಯಿ ಹಾಕುತ್ತಿತ್ತು. ಕೈಯ್ಯಲ್ಲಿದ್ದ ಬಾರುಕೋಲಿನಿಂದ ಕುದುರೆಯ ಹಣೆಗೆ ಹೊಡೆದ. ಆಗ ಅದು ಕತ್ತನ್ನೆತ್ತಿತೇ ಹೊರತು, ಪಟ್ಟು ಬಿಡದೆ ಗೊರಗುಟ್ಟಿತು. ಮಾತಿಲ್ಲದೆ ಅವರು ಮೆಲ್ಲಗೆ ಸಾಗಿದರು. ಮನೆಯಿಂದಲೂ ಹಿಂಬಾಲಿಸಿಕೊಂಡು ಬಂದಿದ್ದ ಸ್ಟ್ರೆಶ್ನೆಫ್‌ನ ಮುದಿ ನಾಯಿ, ಕುಕ್ಕಲು ನಡಿಗೆಯಲ್ಲಿ